# ಪ್ರವಾಸ ಮುಗಿಸಿ

## ಕವನ ಹುಟ್ಟಿದ ಸಮಯ



**ಕಾವ್ಯ, ವಿಮರ್ಶೆ ಮತ್ತು ಅನುವಾದಗಳ ಮೂಲಕ ಕನ್ನಡ ಸಾಹಿತ್ಯಕ್ಕೆ ಗಮನಾರ್ಹ ಕೊಡುಗೆ ನೀಡಿರುವ ಎನ್‌.ಎಸ್‌. ಲಕ್ಷ್ಮೀನಾರಾಯಣ ಭಟ್ಟರು (1936 – 2021), ಕನ್ನಡ ಮೇಷ್ಟ್ರು ಪರಂಪರೆಯ ಪ್ರಮುಖ ಕೊಂಡಿಯೂ ಹೌದು. ಭಾವಗೀತೆಗಳ ಮೂಲಕ ಕನ್ನಡಿಗರ ಮನೆ–ಮನಗಳನ್ನು ತಲುಪಿದ ಈ ಕವಿ, ಶೇಕ್ಸ್‌ಪಿಯರ್‌, ಯೇಟ್ಸ್‌ರ ಕಾವ್ಯದ ಚೆಲುವನ್ನು ಸಹೃದಯರಿಗೆ ಪರಿಚಯಿಸಿದವರು. ಕಳೆದ ಮಾರ್ಚ್‌ 6ರಂದು ನಿಧನರಾದ ಎನ್‌.ಎಸ್‌.ಎಲ್‌. ಅವರ ಕವಿತೆಯೊಂದರ ನೆನಪಿನ ಮೂಲಕ, ಕವಿಯ ಬದುಕಿನ ಒಂದು ರಸಪ್ರಸಂಗವನ್ನು ಕಟ್ಟಿಕೊಡುವ ವಿಶಿಷ್ಟ ಪ್ರಯತ್ನ ಇಲ್ಲಿದೆ.**

**■ ಜಿ.ವಿ. ಅರುಣ**

ಎನ್‌.ಎಸ್‌. ಲಕ್ಷ್ಮೀನಾರಾಯಣ ಭಟ್ಟರು ಬೆಂಗಳೂರಿಗೆ ಬಂದು ನಮ್ಮ ತಂದೆಯವರಿಗೆ (‘ಇಗೋ ಕನ್ನಡ’ದ ಪ್ರೊ. ಜಿ.ವಿ. ವೆಂಕಟಸುಬ್ಬಯ್ಯ) ಪರಿಚಯವಾದ ನಂತರ, ಅವರು ನಮ್ಮ ಮನೆಗೆ ಆಗಾಗ ಬಂದು ಹೋಗುತ್ತಿದ್ದರು. ಯುವಕ, ಆಕರ್ಷಕ ವ್ಯಕ್ತಿತ್ವ ಮತ್ತು ಅವರು ನುಡಿಯುತ್ತಿದ್ದ ಶಿವಮೊಗ್ಗದ ಕನ್ನಡದ ಕಂಪಿಗೆ ನಾನು ಮರುಳಾಗಿದ್ದೆ. (ಅವರು ಆಗಾಗ ಬಳಸುತ್ತಿದ್ದ ‘ಹಾಗೆನೆವೆಯೆ’ ನನಗೆ ಖುಷಿ ಕೊಡುತ್ತಿತ್ತು). ಅವರು ನನ್ನೊಡನೆ ಮಾತನಾಡುವಾಗ, ಅವರ ಅಧ್ಯಾಪಕತನದ ಹಿನ್ನೆಲೆಯಲ್ಲಿ ‘ಏನು ಓದಿದೆ?’ ಎಂದು ವಿಚಾರಿಸುತ್ತಿದ್ದರು. ಜ್ಯೋತಿ ಅವರೊಡನೆ ವಿವಾಹವಾದ ನಂತರ ನವದಂಪತಿ ಮನೆಗೆ ಬಂದಿದ್ದರು. ಚಿಕ್ಕಂದಿನಲ್ಲೇ ತಾಯಿಯನ್ನು ಕಳೆದುಕೊಂಡಿದ್ದ ಜ್ಯೋತಿ, ನಮ್ಮ ತಾಯಿಯವರನ್ನು ಬಹಳ ಹಚ್ಚಿಕೊಂಡುಬಿಟ್ಟರು. ‘ಮಧ್ಯಾಹ್ನ ಒಬ್ಬಳೇ ಬೇಜಾರಾದರೆ ಸೀದಾ ಇಲ್ಲಿಗೆ ಬಂದು ಬಿಡು’ ಎಂದು ನಮ್ಮ ತಾಯಿಯವರು ಪ್ರೀತಿಯ ಆಹ್ವಾನ ನೀಡಿದ್ದರು. ಬೆಂಗಳೂರಲ್ಲಿ ಯಾರ ಪರಿಚಯವೂ ಇಲ್ಲದ ಆಕೆಗೆ ಅದು ಓಯಸಿಸ್ಸಿನಂತೆ ಕಂಡಿತ್ತು. ಹಾಗಾಗಿ ಜ್ಯೋತಿ ನಮಗೆಲ್ಲ ನಮ್ಮ ಮನೆಯವರೇ ಆಗಿಹೋದರು.

1966ರ ದಸರಾ ರಜೆಯಲ್ಲಿ ನಮ್ಮ ತಂದೆಯವರ ವೈದ್ಯ ಮಿತ್ರರ ಗುಂಪು ದಕ್ಷಿಣಭಾರತದ ಪ್ರವಾಸಕ್ಕೆ ಸಜ್ಜಾಯಿತು. ಆ ಗುಂಪು ತಮ್ಮ ತಮ್ಮ ಕುಟುಂಬಗಳ ಜೊತೆ ಆಗಿಂದಾಗ ಪ್ರವಾಸಕ್ಕೆ ಹೋಗುತ್ತಿದ್ದುದರಿಂದ ಅವರಲ್ಲೆಲ್ಲ ಒಂದು ಆತ್ಮೀಯತೆ ಬೆಳೆದಿತ್ತು. ಪ್ರವಾಸದ ದಿನ ಹತ್ತಿರ ಬಂದಾಗ ಇಬ್ಬರು ಬರಲಾಗುತ್ತಿಲ್ಲ ಎಂದು ತಿಳಿದು, ಜ್ಯೋತಿಯೊಡನೆ ಪ್ರವಾಸಕ್ಕೆ ಬರುವಂತೆ ನಮ್ಮ ತಂದೆ–ತಾಯಿಯರು ಭಟ್ಟರಿಗೆ ಹೇಳಿದರು. ಅವರು ಸಂತೋಷದಿಂದ ಸೇರಿಕೊಂಡರು.

ಆಗ ತಾನೇ ಮದುವೆಯಾಗಿ ಬಂದಿದ್ದ ಅವರು ಮೊದಲ ಬಾರಿ ಈ ಗುಂಪಿನೊಡನೆ ಸೇರಿದ್ದರಿಂದ ಆ ಜೋಡಿಯ ಮೇಲೆ ಎಲ್ಲರ ಗಮನ. ಎಲ್ಲ ಹಿರಿಯರೂ ಅವರಿಬ್ಬರನ್ನು ಕೀಟಲೆ ಮಾಡಿದಾಗ ಇಬ್ಬರೂ ನಾಚಿದರು, ಸ್ವಲ್ಪ ಬಿಗುವೂ ಆದರು. ಎರಡು ದಿನಗಳಲ್ಲಿ ಎಲ್ಲರೊಡನೆ ಹಳೆಯ ಪರಿಚಯದವರಂತೆ ಬೆರೆತು ಸಂಭ್ರಮಿಸಿದರು. ಆದರೆ ಕೀಟಲೆ ತಪ್ಪಲಿಲ್ಲ.

ಅಷ್ಟರಲ್ಲಿ ಅವರಿಬ್ಬರಿಗೂ ತಿಳಿಯದಂತೆ ಉಳಿದವರೆಲ್ಲ ಸೇರಿ ಒಂದು ಪಿತೂರಿ ನಡೆಸಿದ್ದರು. ಬಸ್ಸಿನಲ್ಲಿ ಹೋಗುತ್ತಿರುವಾಗ, ನರಸಿಂಹಮೂರ್ತಿ ಎನ್ನುವವರು ಭಟ್ಟರ ಬಳಿ ತೆರಳಿ, ಅವರ ಪತ್ನಿಯನ್ನು ತೋರಿಸುತ್ತಾ ‘ಇವಳು ನಮ್ಮ ಹುಡುಗಿ. ಇವಳನ್ನು ನೀನು ಮದುವೆಯಾಗುತ್ತೀಯಾ?’ ಎಂದು ಕೇಳಿದರು. ಅವರು ಕಕ್ಕಾಬಿಕ್ಕಿಯಾಗಿ ಅವರ ಪತ್ನಿಯ ಕಡೆ ನೋಡಿದರು. ನರಸಿಂಹಮೂರ್ತಿಗಳು ಜ್ಯೋತಿಯ ಕಡೆ ತಿರುಗಿ, ‘ಈ ವರ ನಿನಗೆ ಇಷ್ಟವೇನಮ್ಮ? ಇವರನ್ನು ಮದುವೆಯಾಗುವೆಯಾ?’ ಎಂದು ಕೇಳಿದರು. ಇಬ್ಬರೂ ತಬ್ಬಿಬ್ಬಾಗಿ, ‘ನಾವು ಗಂಡಹೆಂಡಿರು. ನಮಗೆ ಆಗಲೇ ಮದುವೆ ಆಗಿದೆ’ ಎಂದರು.

ನರಸಿಂಹಮೂರ್ತಿಗಳು ‘ಇದೊಳ್ಳೆ ಚೆನ್ನಾಗಿದೆ,

